ಕಳೆದ ನಾಲ್ಕು ವರ್ಷಗಳಿಂದ ಎಲ್ಲ ಅವಕಾಶಗಳನ್ನು ಕೈ ಚೆಲ್ಲಿ ಬೆಂಗಳೂರಿನ ಜನಸಂದಣಿಯ ನಡುವೆ ನಿಂತು ಅವಳಿಗಾಗಿ ಕಾಯುತ್ತಿದ್ದ.

ಸುಹಾಸ ಏನನ್ನೋ ಓದುತ್ತಾ ಕುಳಿತುಕೊಂಡಿದ್ದ. ಅಂಜಲಿ ಒಂದು ದೊಡ್ಡ ಲೋಟದಲ್ಲಿ ಹಾಲನ್ನು ತಂದು ಅವನ ಎದುರಿಟ್ಟು ಸಂಜೆ ಸ್ಕೂಲ್ ಮುಗಿದ ಮೇಲೆ ಹೊರಗೆ ಹೋಗೋಣ, ನಿನ್ನನ್ನು ನೋಡುವುದಕ್ಕೆ ಒಬ್ಬರು ಬರುತ್ತಾರೆ. ಅವರು ನಿನಗೂ ಇಷ್ಟವಾದರೆ ಅವರ ಮನೆಗೆ ನಾವು ಹೋಗಿ ಅಲ್ಲಿಯೇ ಇರೋಣ ಎಂದಳು. ಏಳು ವರ್ಷಗಳ ಸುಹಾಸ ಹಾಲು ಕುಡಿಯುತ್ತಾ ತನಗೆ ಇದಕ್ಕೆ ಒಪ್ಪಿಗೆ ಇದೆ ಎನ್ನುವಂತೆ ಕುತ್ತಿಗೆ ಅಲುಗಾಡಿಸಿದ.

ಮನೋಹರನ ಲೋಕದಿಂದ ನಿಧಾನವಾಗಿ ಹೊರಬರಲು ಯತ್ನಿಸುತ್ತಿದ್ದ ಅಂಜಲಿಗೆ ಇತ್ತೀಚೆಗೆ ತನಗೂ ಒಬ್ಬರು ಸಂಗಾತಿ ಬೇಕು ಅನಿಸುತ್ತಿರುವುದನ್ನು ಗಮನಿಸಿಕೊಂಡಿದ್ದಳು. ಮಹಾನಗರಗಳಲ್ಲಿ ಓತಪ್ರೋತವಾಗಿ ಹರಿಯುತ್ತಿರುವ ಭಾವನೆಗಳ ಜಗತ್ತಿನಲ್ಲಿ ಮಿತವಾಗಿಯಾದರೂ ಒಂದು ಪ್ರೀತಿಯ ಮಾತಿನ ಅವಶ್ಯಕತೆ ಎಷ್ಟಿದೆ ಎಂಬುದರ ಅರಿವಿನ ಜೊತೆಗೆ ಅಭಿಜಿತನ ಹಟಮಾರಿಯಂಥ ಪ್ರೀತಿಯೂ ಅವಳನ್ನು ಈ ಹಂತಕ್ಕೆ ತಂದು ನಿಲ್ಲಿಸಿತ್ತು. ಸಂಜೆ ಸುಹಾಸನಿಗೆ ಪರಿಚಯಿಸಿದ ನಂತರ ಅಭಿಜಿತನೊಂದಿಗೆ ಒಂದಿಷ್ಟು ಸಮಯ ಕಳೆಯಲು ಬಿಡಬೇಕು. ಸುಹಾಸ ಕೇಳುವ ಎಲ್ಲ ಪ್ರಶ್ನೆಗಳಿಗೂ ಅವನು ಎಷ್ಟು ನಿಧಾನವಾಗಿ ಉತ್ತರಿಸುತ್ತಾನೆ ಎನ್ನುವುದನ್ನು ನೋಡುತ್ತಲೇ ಅಭಿಜಿತನೊಂದಿಗಿನ ಸಂಬಂಧವನ್ನು ಎಷ್ಟು ತೀಕ್ಷ್ಣವಾಗಿಯೂ, ಎಷ್ಟು ದೀರ್ಘವಾಗಿಯೂ ತೆಗೆದುಕೊಳ್ಳಬೇಕು ಎನ್ನುವ ಅಂದಾಜಿನ ನೂಲನ್ನು ಒಳಗೇ ನೇಯತೊಡಗಿದಳು.

ಸೀದಾ ಆಫೀಸಿಗೆ ಹೊರಟು ಬಂದವಳ ಮುಖದಲ್ಲಿ ಅದೊಂದು ಬಗೆಯ ಹೊಸ ನಗುವಿತ್ತು. ಶಶಾಂಕನೂ ಸೇರಿದಂತೆ ಐದಾರು ಜನರು ಕೂತು ಬೋರ್ಡ್ ರೂಮಿನಲ್ಲಿ ಮಾತನಾಡುತ್ತಿದ್ದರು. ಬಾಗಿಲನ್ನು ತಳ್ಳುತ್ತಾ ಒಳಗೆ ಬಂದ ಅಂಜಲಿ, ‘ ಯೂ ನೋ ಶಶಾಂಕ್ ಐ ಫೌಂಡ್ ಅ ಮಾಡೆಲ್ ಇನ್ ಮುಂಬೈ, ಫಕ್ಕಿಂಗ್ ಹಾಟ್ ಶಿ ಇಸ್. ಹರ್ ಬ್ರೆಸ್ಟ್ಸ್ ಆರ್ ಇನ್ ರೈಟ್ ಸೈಜ್, ನೀನು ಅವಳನ್ನು ನೋಡಬೇಕು. ಲೆಟ್ ಮೀ ಶೇರ್ ಹರ್ ಇನ್‌ಸ್ಟಾಗ್ರಾಂ ಪ್ರೊಫೈಲ್’ ಎಂದು ಅಲ್ಲಿಯೇ ಅವನಿಗೆ ಲಿಂಕ್ ಶೇರ್ ಮಾಡಿದಳು. ‘ಬೇರೆ ಕಾಂಡೋಮ್ ಕಂಪನಿಗಳ ಹಾಗೆ ಆ್ಯಡ್ ಶೂಟ್ ಮಾಡುವುದು ಬೇಡ. ಪ್ಲಾನ್ ಅಂಡ್ ಸ್ಕ್ರಿಪ್ಟ್ ಮಸ್ಟ್ ಬಿ ಕ್ರೇಜಿ, ಐ ವಿಲ್ ಟಾಕ್ ಟು ಅಭಿಜಿತ್’ ಎಂದು ಬರ್ರನೆ ಹೊರಗೆ ಹೋದಳು. ಅಭಿಜಿತ ಒಂದು ಮೂಲೆಯಲ್ಲಿ ಕೂತು ಒಬ್ಬನೇ ಲ್ಯಾಪ್‌ಟಾಪ್ ಎದುರು ಏನನ್ನೋ ಹುಡುಕುತ್ತಿದ್ದ. ಅಂಜಲಿ ಸೀದಾ ಅವನ ಎದುರು ಕೂತವಳು ಕೈ ಹಿಡಿದು ಹೊರಗೆ ಕರೆದುಕೊಂಡು ಬಂದಳು. ಅದೇ ಮೊದಲ ಬಾರಿಗೆ ಅವನಿಗೆ ಅವನಿಷ್ಟದ ಒಂದು ಸಿಗರೇಟು ಕೊಡಿಸಿದಳು. ಅಂಜಲಿಯ ಮುಖದಲ್ಲಿ ಈ ಹಿಂದೆ ಎಂದೂ ಕಾಣದ ಸಂತೋಷದ ಅನೇಕ ಎಳೆಗಳು ಒಂದಕ್ಕೊಂದು ಬೆಸೆದುಕೊಳ್ಳುತ್ತಿದ್ದವು.

ಸುಹಾಸನಿಗೆ ಸಂಜೆ ನಿನ್ನನ್ನು ಪರಿಚಯ ಮಾಡಬೇಕು ಅಂತ ಅನ್ಕೊಂಡ್ ಇದೀನಿ. ನೀನು ಅವನಿಗೂ ಇಷ್ಟವಾದರೆ ಮುಂದೆ ನೋಡೋಣ ಎಂದು ದನಿ ತಗ್ಗಿಸಿದಳು ನಾಚಿಕೆಯಲ್ಲಿ. ದಿಗಂತದ ತುದಿಯಲ್ಲಿ ಹಾರುವ ಗಾಳಿಪಟದಂತೆ ಅದುವರೆಗೂ ಕಾಣುತ್ತಿದ್ದ ಅಭಿಜಿತ ಮಾತ್ರ ಒಂದು ಸಣ್ಣ ನಗುವನ್ನಷ್ಟೇ ಹೊರಗೆ ಹಾಕಿ ಆಯ್ತು ಸಂಜೆ ಸಿಗೋಣ ಎಂದು ಸುಮ್ಮನಾದ. ಅವನದೇ ವಯೋಮಾನದ ಅಂಜಲಿಯನ್ನು ಸಂಗಾತಿಯನ್ನಾಗಿ ಆಯ್ಕೆ ಮಾಡಿಕೊಳ್ಳುವುದಕ್ಕೆ ಅವನ ಅಂತರ್ಯದ ಮಾತುಗಳನ್ನು ಹೇಳಿಕೊಳ್ಳುವುದಕ್ಕೆ ಅಥವಾ ತೋರಿಸಿಕೊಳ್ಳುವುದಕ್ಕೆ ಅನೇಕ ರಹದಾರಿಗಳಿದ್ದವು. ಮಾತು, ಕ್ರಿಯೆ, ತಮಾಷೆ, ಹತಾಶೆ, ಕಣ್ಣೀರು ಹೀಗೆ. ಈಗ ಇದ್ದಕ್ಕಿಂದಂತೆ ಏಳು ವರ್ಷದ ಹುಡುಗನನ್ನು ಹತ್ತಿರವಾಗಿಸಿಕೊಳ್ಳುವುದು ಹೇಗೆ? ಅವನೊಂದಿಗೆ ಬಳಸಬಹುದಾದ ಭಾಷೆ ಯಾವುದಾಗಿರಬೇಕು? ಕೃತಕವಲ್ಲದ ಯಾವ ಮಾತುಗಳನ್ನು ಅವನೊಂದಿಗೆ ಹಂಚಿಕೊಳ್ಳಬಹುದು? ಹೀಗೆ ಸಾಲು ಸಾಲು ಪ್ರಶ್ನೆಗಳು ಕೊರಳನ್ನು ಸುತ್ತಿಕೊಳ್ಳುವ ಹೊತ್ತಿಗೆ ಸಿಗರೇಟಿನ ಕೆಂಡ ತುದಿ ತಲುಪಿತ್ತು.

ಕಳೆದ ನಾಲ್ಕು ವರ್ಷಗಳಿಂದ ತಾನು ಕಾಯುತ್ತಿದ್ದ ದಿನ ಎದುರಾಗಿತ್ತು. ಆದರೆ ಅದನ್ನು ಎದುರುಗೊಳ್ಳಲು ಬೇಕಾದ ಯಾವ ತಯಾರಿಯೂ ಅಭಿಜಿತನಿಗೆ ಇದ್ದಂತೆ ಇರಲಿಲ್ಲ, ಆದರೆ ಅಂಜಲಿ ಎನ್ನುವ ಒಂದು ಜೀವದ ಜೊತೆ ತಾನು ಎಂದಿಗೂ ಇರಬಹುದು